೧೨ ಸಂರಪುರದ ಸಬ್‌ಇನ್ಸ್‌ಪೆಕ್ಟರ್‌ರವರನ್ನು ವರ್ಗ ಮಾಡುವುದು

ಶ್ರೀ ಮದನ ಗೋಪಾಲ ನಾಯಕ. (ಸಂರಪುರ).—ಮಾನ್ಯ ಅಧ್ಯಕ್ಷರೆ, ಸಂರಪುರ ತಾಲ್ಲೂಕಿನ ತಾಲೂಗತ್ತಿ ಮಂಡಲ ಪಂಚಾಯಿತಿಯ ಕಳೆದ ಚುನಾವಣೆ ಸಂದರ್ಭದಲ್ಲಿ ನಡೆದ ಪ್ರಕರಣದ ಬಗ್ಗೆ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಅವರನ್ನು ವರ್ಗ ಮಾಡಬೇಕೆಂದು ಆಥವಾ ರಜೆಯ ಮೇಲೆ ಕಳುಹಿಸಿ ಬೇರೆಯವರನ್ನು ಅಲ್ಲಿಗೆ ಹಾಕುವುದಾಗಿ ಸರಕಾರದವರು ಇದೇ ಅಧಿವೇಶನದಲ್ಲಿ ಆಶ್ವಾಸನೆ ನೀಡಿದ್ದರು. ಈಗ ಅಲ್ಲಿ ಚುನಾವಣೆ ಸಂದರ್ಭದಲ್ಲಿ ನಾಮಪತ್ರ ಸಲ್ಲಿಸುವ ಕಾರ್ಯ ಆರಂಭವಾಗಿದೆ, ಚುನಾವಣೆಯನ್ನು ಮುಂದೂಡಿದ ಬಗ್ಗೆ ಇಡೀ ಪ್ರಕರಣದ ಬಗ್ಗೆ ಐ. ಎ. ಎಸ್. ಅಧಿಕಾರಿಯೊಬ್ಬರ ಮೂಲಕ ತನಿಖೆ ಮಾಡಿಸುವುದಾಗಿ ಸರಕಾರದವರು ಸಭೆಗೆ ಆಶ್ವಾಸನೆ ನೀಡಿದ್ದರು ಗುಲ್ಬರ್ಗಾ ವಿಭಾಗಾಧಿಕಾರಿಯವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆಯೆಂದು ತಿಳಿದು ಬಂದಿದೆ. ಸದರಿ ಸಬ್‌ಇನ್ಸ್‌ಪೆಕ್ಟರ್ ಈಗ ಅಪರಾಧಿಗಳ ಮೇಲೆ ಜಾರ್ಜ್‌ಶೀಟ್ ಹಾಕಬೇಕಾಗಿದ್ದು ಯಾರ ಮೇಲೆ ಹಾಕಬೇಕೋ ಅವರನ್ನು ಬಿಟ್ಟು ಬೇರೆಯವರ ಮೇಲೆ ಹಾಕಲಾಗಿದೆಯೆಂದು ತಿಳಿದು ಬಂದಿದೆ. ಪೋಲೀಸ್ ಕಾನ್ಸ್‌ಟೇಬಲ್ ಕರಿಯಪ್ಪ ಪೂಜಾರಿ ಅಂದು ಚುನಾವಣಾ ಕರ್ತವ್ಯದಲ್ಲಿದ್ದು ಅವರ ಹೇಳಿಕೆ ತೆಗೆದುಕೊಳ್ಳಬೇಕಾಗಿತ್ತು. ಆಗಲೂ ಅವರ ಹೇಳಿಕೆ ತೆಗೆದುಕೊಂಡಿರುವುದಿಲ್ಲ ಈಗಲೂ ತೆಗೆದುಕೊಂಡಿಲ್ಲವಾದ್ದರಿಂದ ಇಡೀ ಪ್ರಕರಣವನ್ನು ದಮನ ಮಾಡುವ ಸಲುವಾಗಿ ಈ ಕ್ರಮ ಕೈಕೊಳ್ಳಲಾಗಿದೆಯೆಂದು ತಿಳಿದು ಬಂದಿದೆ. ಸಬ್ ಇನ್ಸ್‌ಪೆಕ್ಟರನ್ನು ಇನ್ನೂ ವರ್ಗ ಮಾಡದಿದ್ದು, ಚುನಾವಣೆ ನಿಷ್ಪಕ್ಷಪಾತವಾಗಿ ನಡೆಯಲು ಅನುಕೂಲ ಸುವಂತೆ ಈ ಕೂಡಲೇ ಸದರಿ ಸಬ್ ಇನ್ಸ್‌ಪೆಕ್ಟರ್ ಅವರನ್ನು ವರ್ಗಮಾಡಿ ಬೇರೊಬ್ಬರನ್ನು ಅವರ ಜಾಗದಲ್ಲಿ ಹಾಕಿಸಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ ರಾಚಯ್ಯ. (ಗೃಹಮಂತ್ರಿಗಳು).—ಸಂರಪುರ ತಾಲೂಕಿನ ತಾಲೂಗತ್ತಿ ಮಂಡಲ ಪಂಚಾಯಿತಿಯ ಕಳೆದ ಚುನಾವಣೆ ಸಂದರ್ಭದಲ್ಲಿ ಶ್ರೀ ತೆಂಕರ್ ಎಂಬ ಚುನಾಯಿತ ಜಿಲ್ಲಾ ಪರಿಷತ್ ಸದಸ್ಯರನ್ನೂ ಒಳಗೊಂಡಂತೆ ಎಲ್ಲಾ ನಾಲ್ಕು ಜನರನ್ನು ಬಂಧಿಸಲಾಗಿದೆ. ಆದರೆ ಅವರು ನಿರೀಕ್ಷಣಾ ಜಾಮೀನನ್ನು ಪಡೆದಿರುತ್ತಾರೆ ಘಟನೆಯಾದ ದಿನದಂದು ಚುನಾವಣೆಯು ಕೆಲಸದ ಮೇಲಿದ್ದ ಪೇದೆ ಶ್ರೀ ಕರಿಯಪ್ಪ ಪೂಜಾರಿಯವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದು ದೋಷಾರೋಪಣೆ ಸಲ್ಲಿಸಲಾಗಿದೆ. ವಿಭಾಗಾಧಿಕಾರಿಗಳ ವಿಚಾರಣೆಯು ವರದಿ ಬಂದನಂತರ ಪಿ.ಎಸ್.ಐ. ರವರ ವರ್ಗಾವಣೆಯನ್ನು ಪರಿಶೀಲಿಸಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಎಲೆಕ್ಷನ್...

ಅಧ್ಯಕ್ಷರು.—ಯಾವ ರೂಲ್ಸ್ ಪ್ರಕಾರ ಮಾತನಾಡುತ್ತೀರಿ ಹೇಳಿ. ಇದು ಖಿಖಿಳರ ವಿಷಯ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಅಪ್ಪಣೆ ಕೊಟ್ಟರೆ...

ಅಧ್ಯಕ್ಷರು.—ನೀವು ಉಪನಾಯಕರು, ರೂಲ್ಸನ್ನು ಮುರಿಯಬಾರದು,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಪ್ಪು ಅಪ್ಪಣೆ ಪಡೆದು ಮಾತನಾಡುತ್ತಾ ಇದ್ದೇನೆ, ರೂಲ್ಸ್ ಮುರಿಯುವ ಪ್ರಶ್ನೆ ಇಲ್ಲ.

(ಗೊಂದಲ)

ಅಧ್ಯಕ್ಷರು.—ಯಾರು ಏನೇ ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ನಾನು ನಿಯಮ ಬಿಟ್ಟು ನಡೆಸುವುದಕ್ಕೆ ತಯಾರಿಲ್ಲ. ಮದನಗೋಪಾಲ ನಾಯಕರು ಶಾಣಪ್ಪನವರು ಮಾತ ನಾಡಿದ್ದನ್ನು ಎಕ್ಸ್‌ಪಂಜ್ ಮಾಡಿ. ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಇವತ್ತು ೬೦೦ ಕೋಟಿ ರೂಪಾಯಿ ಡಿಪಾಸ್ಟ್‌ಗಾಡ್ ಇದೆ. ಅದರ ಮೇಲೆ ಮಾನ್ಯ ಖಾರ್ಗೆಯವರು ಭಾಷಣ ಶುರು ಮಾಡುತ್ತಾರೆ. ಅವರು ಹೇಗೆ ಭಾಷಣ ಮಾಡುತ್ತಾರೆ ಸ್ವಲ್ಪ ಕೇಳಿ ಈಗ ಯಂಕನಾಯಕರೇ, ನಿಮ್ಮದು ಹೇಳಿ.